**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 2003/2014**

| | | | |
|---|---|---|---|
| ಸಾಕ್ಷಿದಾರರ ಹೆಸರು | | ಶಿವಸ್ವಾಮಿ | ಫ್ರಾಸಾಃ 3 |
| ತಂದೆಯ/ಗಂಡನ ಹೆಸರು | | ಕಣ್ಣಪ್ಪ ಚಿಕ್ಕೇಗೌಡ | ಚಾಸಾಃ 8 |
| ವಯಸ್ಸು | | 38 ವರ್ಷ | |
| ಕೆಲಸ | | ವ್ಯವಸಾಯ | ಸಾ ಪ್ರ ಬೋ |
| ವಾಸ | | ಕೆಂಪಿಸಿದ್ದನಹುಂಡಿ ಗ್ರಾಮ | ದಿಃ 21/12/2021 |

ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ

ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ. ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ಘಟನೆಯನ್ನು ಕಣ್ಣಾರೆ ನೋಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಶ್ರೀ. ಎ.ಪಿ.ಪಿ.ಯವರಿಂದಃ

ದಿನಾಂಕ **18.05.2014** ರಂದು ಸಂಜೆ **5.00** ಗಂಟೆ ಸಮಯದಲ್ಲಿ ನಂಜನಗೂಡು ಚಾಮರಾಜನಗರ ಮುಖ್ಯ ರಸ್ತೆಯ ಮಹದೇವನಗರ ಗ್ರಾಮದ ಹತ್ತಿರ ರಾಜಣ್ಣ ಎಂಬುವರು ತಮ್ಮ ಬೈಕ್ ಸಂಖ್ಯೆ ಕೆಎ-**09**-ಡಬ್ಲ್ಯೂ-**8515** ಟಿ ವಿ ಎಸ್ ಮೊಪೆಡ್ ಅಲ್ಲಿ ಬರುತ್ತಿದ್ದಾಗ ಚಾಮರಾಜನಗರ ಕಡೆಯಿಂದ ನಂಜನಗೂಡು ಕಡೆಗೆ ರಸ್ತೆಯ ಎಡಭಾಗ ಬರುತ್ತಿದ್ದ ಆರೋಪಿಯು ಕೆ ಎಸ್ ಆರ್ ಟಿ ಸಿ ಬಸ್ ಕೆಎ-**09**-ಎಫ್-**3350** ಬಸ್ ಅನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿದ ಪರಿಣಾಮ ರಾಜಣ್ಣ ಎಂಬುವರಿಗೆ ತೀವ್ರ ಪೆಟ್ಟಾಗಿ ಆರೋಪಿಯು ಕೆ ಎಸ್ ಆರ್ ಟಿ ಸಿ ಬಸ್ ಅನ್ನು ವೇಗವಾಗಿ ಓಡಿಸಿದ ಪರಿಣಾಮ ಅವರು ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ **31.05.2014** ರಂದು ಈಗ ಓದಿ ಹೇಳಿದಂತೆ ದಿನಾಂಕ **18.05.2014** ರಂದು - - - ವಿಚಾರ

ತಿಳಿಯಿತು ಎಂದು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ತನ್ನ ಹೇಳಿಕೆ ಭಾಗವನ್ನು ಅಲ್ಲಗಳೆದ ಕಾರಣ ಅದನ್ನು ನಿಪಿ-7 ಎಂದು ಗುರುತಿಸಲಾಯಿತು. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ,
ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಒ
ಸಹಿ/-
1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ,
ನಂಜನಗೂಡು